# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 122 | Pages. 2 | Date: 16-04-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 122 - ಪುಟಗಳು : 2 | 16-04-2026 | ಗುರುವಾರ | Ph: 8762954248 | ದರ : ₹1


# 2200 ಕೋಟಿ ಖರ್ಚು, ಫಲ ಶೂನ್ಯ

## ಜೆಜೆಎಂ ವಿರುದ್ಧ : ಸಂಸದ ಶ್ರೇಯಸ್ ಪಟೇಲ್ ಅಸಮಾಧಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯಲ್ಲಿ ಜಲ ಜೀವನ ಮಿಶನ್(ಜೆಜೆಎಂ) ಅಡಿ ಕಾಮಗಾರಿ ಸರಿಯಾಗಿ ಅನುಷ್ಠಾನ ಆಗದೇ ಇರುವುದಕ್ಕೆ ಸಂಸದ ಶ್ರೇಯಸ್ ಎಂ.ಪಟೇಲ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಜಿಪಂ ಸಭಾಂಗಣದಲ್ಲಿಂದು ನಡೆದ ದಿಶಾ ಸಭೆಯ ಅಧ್ಯಕ್ಷತೆವಹಿಸಿ ಅವರು ಮಾತನಾಡಿದರು.

ಕಳೆದ 2020-21 ನೇ ಸಾಲಿನಿಂದ ಈವರೆಗೂ 2200 ಕೋಟಿ ರೂ. ಅನುದಾನ ಮಂಜೂರಾಗಿದೆ. ಇದರ ಅಡಿಯಲ್ಲಿ ಜಿಲ್ಲಾದ್ಯಂತ 2834 ಕೆಲಸ ಕೈಗೆತ್ತಿಕೊಳ್ಳಲಾಗಿದೆ. ಆದರೆ ಅವುಗಳಲ್ಲಿ 1310 ಕೆಲಸ ಪೂರ್ಣವಾಗಿವೆ ಎಂದು ಜೆಜೆಎಂ ಅಧಿಕಾರಿ ಸಭೆಗೆ ಮಾಹಿತಿ ನೀಡಿದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ. 2200 ಕೋಟಿ ಅನುದಾನ ಬಂದರೂ ಒಂದೇ ಒಂದು ಕಾಮಗಾರಿ ಪೂರ್ಣಗೊಂಡಿಲ್ಲ. ಅರಸೀಕೆರೆ ಕ್ಷೇತ್ರದಲ್ಲಿ ಅನೇಕ ರಸ್ತೆಗಳು ಅರೆಕೊರೆಯಾಗಿವೆ. ನಾವು ಮತದಾರರ ಮುಂದೆ ತಲೆ ಎತ್ತಿ ತಿರುಗಾಡಲು ಆಗುತ್ತಿಲ್ಲ. ಬೈಯ್ದುಕೊಂಡು ತಿರುಗುತ್ತಿದ್ದಾರೆ ಎಂದು ಸಿಟ್ಟಾದರು.




ಇದರಿಂದ ನದಿ ಮೂಲದಿಂದ ನೀರು ಕೊಡುವ ಉದ್ದೇಶ ಇದುವರೆಗೂ ಈಡೇರಿಲ್ಲ. ಒಂದೇ ಒಂದು ಕಾಮಗಾರಿಯಿಂದಲೂ ನದಿ ಮೂಲದಿಂದ ನೀರು ಪೂರೈಕೆ ಮಾಡಲಾಗುತ್ತಿಲ್ಲ. ಹಿಂದೆ ಇದ್ದ ಗ್ರಾಪಂ ವ್ಯಾಪ್ತಿಯ ಕೊಳವೆಬಾವಿ ಹಾಗೂ ತೆರೆದ ಬಾವಿ ಮೂಲಕ ಮೂಲಕವೇ ನೀರು ಪೂರೈಕೆ ಮಾಡಲಾಗುತ್ತಿದೆ. ಅದೇ ಚೆನ್ನಾಗಿತ್ತು. ಈಗಿನ ಯೋಜನೆಯಿಂದ ಜನ ಪ್ರತಿನಿಧಿಗಳ ಮರ್ಯಾದೆ ತೆಗೆಯುವ ಕೆಲಸ ಆಗುತ್ತಿದೆ ಎಂದು ಬೇಸರ ಹೊರ ಹಾಕಿದರು.

ಇದಕ್ಕೆ ದನಿಗೂಡಿಸಿದ ಸಂಸದ ಶ್ರೇಯಸ್, ಜಿಲ್ಲೆಯ ಎಲ್ಲ ಕಡೆ ಇದೇ ಸಮಸ್ಯೆ ಇದೆ, ಜೆಜೆಎಂ ಒಂದು ರೀತಿಯ ಫ್ಲಾಪ್ ಯೋಜನೆ, ಕೇವಲ ದುಡ್ಡು ಹೊಡೆಯುವ ಕಾರ್ಯಕ್ರಮ. ಎಲ್ಲ ಕಡೆ ರಸ್ತೆ ಹಾನಿ ಮಾಡಲಾಗಿದೆಯೇ ಹೊರತು, ಕೆಲಸ ಊರ್ಜಿತ ಆಗಿಲ್ಲ ಎಂದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಶಿವಲಿಂಗೇಗೌಡರು, ಸಂಸದರ ಅಧ್ಯಕ್ಷತೆಯಲ್ಲೇ ಪ್ರತ್ಯೇಕ ಸಭೆ ಕರೆದು ಚರ್ಚೆ ನಡೆಸಬೇಕು. ಸಭೆಯಲ್ಲಿ ಇಂಜಿನಿಯರ್‌ಗಳು, ಗುತ್ತಿಗೆದಾರರು, ಅಧಿಕಾರಿಗಳು ಎಲ್ಲರೂ ಇರಬೇಕು ಎಂದರು.

ಹಾಸನ-ಅರಸೀಕೆರೆ ನಡುವಿನ ರೈಲು ಓಡಾಟ ವೇಳೆ ಗೇಟ್ ಹಾಕುವುದರಿಂದ 30-40 ನಿಮಿಷ ಆಂಬ್ಯುಲೆನ್ಸ್ ಆದಿಯಾಗಿ ಜನರು ಕಾಯಬೇಕಿದೆ ಎಂದು ಶಾಸಕರು ದನಿ ಎತ್ತಿದರು.

ಈ ವೇಳೆ ಡಿಸಿ ಅವರಿಗೆ ಸೂಚಿಸಿದ ಸಂಸದರು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ, 10 ನಿಮಿಷದ ಮೇಲೆ ಎಲ್ಲೂ ಕೂಡ ಗೇಟ್ ಹಾಕುವುದು ಬೇಡ. ಯಾರೂ ಅನವಶ್ಯಕವಾಗಿ ಕಾಯಬಾರದು. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

> ಜಿಲ್ಲೆಯಲ್ಲಿ ಮುಂಗಾರು ಆರಂಭ ಆಗುತ್ತಿದೆ. ಬಿಜೋಪಚಾರ ಆದ ಜೋಳವನ್ನೇ ಜಿಲ್ಲೆಯಲ್ಲಿ ಹಂಚಿಕೆ ಮಾಡಬೇಕು. ಗುಣಮಟ್ಟದ ಬಿತ್ತನೆ ಬೀಜ ಮಾತ್ರ ವಿತರಣೆ ಮಾಡಬೇಕು ಎಂದು ಸಂಸದರು ತಾಕೀತು ಮಾಡಿದರು. ಕೃಷಿ ಇಲಾಖೆ ಜೆಡಿ ರಮೇಶ್ ಮಾತನಾಡಿ ಜಿಲ್ಲೆಯಲ್ಲಿ ಗೊಬ್ಬರದ ಕೊರತೆ ಇಲ್ಲ. ಬಂದಿದ್ದ ಬೀಜವನ್ನು ವಾಪಸ್ ಕಳಿಸಲಾಗಿದೆ. ಸ್ಕ್ರೀನಿಂಗ್ ಮಾಡಿಸಿ ಗುಣಮಟ್ಟ ಪೂರೈಸಲು ಸೂಚಿಸಲಾಗಿದೆ. ಈ ಬಾರಿ 15 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆಯುವ ಗುರಿ ಹೊಂದಾಗಿದೆ. ಇದಕ್ಕೂ ಅಧಿಕ ಬಿತ್ತನೆ ಆಲೂಗಡ್ಡೆ ಆವಕ ಆಗಿದೆ ಎಂದು ಅಧಿಕಾರಿ ತಿಳಿಸಿದರು.

ಇದಕ್ಕೆ ಬೇರೆಲ್ಲೂ ಸಮಸ್ಯೆ ಇಲ್ಲ. ಅರಸೀಕೆರೆ ಮಾರ್ಗದಲ್ಲೇ ಏಕೆ ಹೀಗೆ, ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕೆಂದರು.

ಅರಸೀಕೆರೆ ಮಾರ್ಗದಲ್ಲಿ ಗೂಡ್ಸ್ ಗಾಡಿ ಹೆಚ್ಚು ಓಡಾಡುತ್ತವೆ. ಹಾಗಾಗಿ ಸಮಸ್ಯೆ ಸರಿಪಡಿಸಿ ಎಂದರು.

ಇದೇ ವೇಳೆ ಅರಸೀಕೆರೆ ರಾಗಿ ಖರೀದಿ ಕೇಂದ್ರಕ್ಕೆ ರಾಜ್ಯದ ಎಲ್ಲ ಕಡೆಯಿಂದ ಬಂದು ಮಾರಾಟ ಮಾಡುತ್ತಿದ್ದಾರೆ. ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ ಎಂದು ದೂರಿದರು.

ಈ ವೇಳೆ ಕೃಷಿ ಇಲಾಖೆ ಜೆಡಿ ರಮೇಶ್ ಮಾತನಾಡಿ, ಬೆಳೆ ಸರ್ವೆ ಮಾಡಿದ್ದೇವೆ. ಜಿಲ್ಲೆಯ 48 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆದಿದ್ದಾರೆ. ಕೆಲವು ಕಡೆ ತೆಂಗು ನಡುವೆ ರಾಗಿ ಬೆಳೆದಿದ್ದಾರೆ. ಈ ಮಾತು ಕೇಳಿ ಕಂಡಾಮಂಡಲರಾದ ಕೆಎಂಶಿ, ತೆಂಗಿನ ಮರಗಳ ನಡುವೆ ಎಲ್ಲಿ ರಾಗಿ ಬೆಳೆದಿದ್ದಾರೆ ತೋರಿಸಿ, ಬೋಗಸ್ ಸರ್ವೆ ಮಾಡಿದ್ದೀರಿ ಎಂದು ಕಿಡಿ ಕಾರಿದರು.

ಕೇಂದ್ರ ಸರ್ಕಾರ ರಾಗಿಗೆ ಬೆಂಬಲ ನೀಡಿದೆ. ರೈತರ ಖಾತೆಗೆ ನೇರ ಹಣ ಸಂದಾಯ ಆಗುತ್ತಿದೆ. ಆದರೆ ಮಧ್ಯವರ್ತಿಗಳು ರೈತರ ಹೆಸರಲ್ಲಿ ಹಣ ಲೂಟಿ ಮಾಡುತ್ತಿದ್ದಾರೆ. ನಿಜ ರೈತರಿಗೆ ಸಿಗುತ್ತಿಲ್ಲ. ಇದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಿದರು. ಬೆಳೆ ಸಮೀಕ್ಷೆ ಸರಿಯಾಗಿ ಆಗಿಲ್ಲ ಎಂದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮೊದಲಾದವರಿದ್ದರು.

# ಸರ್ಕಾರಿ ನೌಕರರ ಕೋ ಆಪರೇಟಿವ್ ಸೊಸೈಟಿ ಪದಾಧಿಕಾರಿಗಳ ಪದಗ್ರಹಣ

ಹಾಸನ: ಹಾಸನ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಕೋ ಆಪರೇಟಿವ್ ಸೊಸೈಟಿಯ 2026-31ನೇ ಸಾಲಿಗೆ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟನೆ ಮಾಡಿದ ಆಲೂರು ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಕೃಷ್ಣೇಗೌಡ ಎ.ಜೆ ಮಾತನಾಡಿ, ಜಿಲ್ಲೆಯ ಸಮಸ್ತ ಸರ್ಕಾರಿ ನೌಕರರಿಗೆ ಈ ಕೋ ಆಪರೇಟಿವ್ ಸೊಸೈಟಿ ಸಾಕಾರವಾಗಿದೆ ಹಾಗೂ ಉತ್ತಮವಾದ ರೀತಿಯಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸರ್ಕಾರಿ ನೌಕರರಿಗೆ ತುರ್ತಾಗಿ ಸಿಗುವ ಸಾಲದ ಸೌಲಭ್ಯ ಹಾಗೂ ಇತರೆ ವಿಷಯಗಳಲ್ಲಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿರುವುದನ್ನು ನಾನು ಕೇಳಿದ್ದೇನೆ. ಹಾಗೆ ಕ್ರಿಯಾಶೀಲವಾಗಿ ನಡೆದುಕೊಂಡು ಬರುತ್ತಿರುವ ಈ ಸಂಘದಲ್ಲಿ ಪಾರದರ್ಶಕವಾದ ಆಡಳಿತ ಹಾಗೂ ನಿರ್ವಹಣೆ ಮುಖ್ಯವಾಗಿದೆ.

ಹಲವಾರು ಸಂಘಗಳು ಹುಟ್ಟುತ್ತವೆ, ನಶಿಸಿಹೋಗುತ್ತವೆ. ಆದರೆ ಎರಡನೇ ಅವಧಿಯಲ್ಲಿ ಈ ಸಂಘವನ್ನ ಮುನ್ನಡೆಸುತ್ತಿರುವ ಸಂಸ್ಥಾಪಕ ಅಧ್ಯಕ್ಷ ಕೆ.ಎಂ ಶ್ರೀನಿವಾಸ್ ಅವರು ಹಾಗೂ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಎ.ಎನ್ ಪರಮೇಶ್



ಮತ್ತು ಉಪಾಧ್ಯಕ್ಷ ಲೋಕೇಶ್ ಕುಮಾರ್ ಎನ್.ಎಸ್ ಅವರು ಇನ್ನೂ ಉತ್ತಮವಾದ ಕೆಲಸ ಮಾಡಲಿ, ಪ್ರಗತಿ ಕಾಣಲಿ ಜಿಲ್ಲೆಯಲ್ಲಿ ಎಲ್ಲಾ ಸರ್ಕಾರಿ ನೌಕರರಿಗೆ ಸೌಲಭ್ಯ ಸಿಗಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಬಸವರಾಜ್ ಹೆಚ್.ಸಿ ಮಾತನಾಡಿ, ಹಲವಾರು ಸಂಘಗಳು ಉದಯವಾಗಿರುವುದನ್ನು ನಾನು ಕಂಡಿದ್ದೇನೆ. ಆದರೆ ಪರದರ್ಶಕವಾಗಿ ಸದೃಢವಾಗಿ ಗೃಹ ನಿರ್ಮಾಣ ಸಹಕಾರ ಸಂಘ ಹಾಗೂ ಕೋ ಆಪರೇಟಿವ್ ಸೊಸೈಟಿ ಒಂದು ನಾಣ್ಯದ ಎರಡು ಮುಖಗಳಂತೆ ಕರ್ತವ್ಯ ನಿರ್ವಹಿಸುತ್ತಿರುವ ಈ ಒಂದು ವ್ಯವಸ್ಥೆಯನ್ನು ನೋಡಿದಾಗ ತುಂಬಾ ಖುಷಿಯಾಗುತ್ತದೆ. ಸಂಸ್ಥಾಪಕ ಅಧ್ಯಕ್ಷರಾದ ಕೆ.ಎಂ ಶ್ರೀನಿವಾಸ ಅವರು ಮತ್ತು ಅಧ್ಯಕ್ಷ ಎನ್ ಪರಮೇಶ್ ಅವರು ಹಲವು ವರ್ಷಗಳಿಂದ ಸ್ನೇಹಿತರಾಗಿದ್ದು, ಪಾರದರ್ಶಕವಾಗಿ ಸಂಘ ಮುನ್ನಡೆಸುವ ಕೆಲಸ ತುಂಬಾ ಉತ್ತಮವಾಗಿದೆ ಎಂದು ಮೆಚ್ಚುವೆ ವ್ಯಕ್ತ ಪಡಿಸಿದರು.

ಎರಡನೇ ಬಾರಿ ಅಧ್ಯಕ್ಷರಾಗಿರುವ ಪರಮೇಶ್ ಅವರಿಗೆ ಅಭಿನಂದನೆ ಹೇಳಿ ನಿಮ್ಮ ಸಂಘದೊಂದಿಗೆ ಸಹಕಾರವಾಗಿರುತ್ತೇನೆಂದರು.

ಈ ಸಂದರ್ಭದಲ್ಲಿ 2026-31ನೇ ಸಾಲಿನ ಕಾರ್ಯಕಾರಿ ಮಂಡಳಿಗೆ ಆಯ್ಕೆಯಾದ ನಿರ್ದೇಶಕರಿಗೆ ಪ್ರಮಾಣ ಪತ್ರ ವಿತರಣೆ ಮಾಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಸೋಮಶೇಖರ್, ಅಣ್ಣಪ್ಪ, ಸಂಘದ ಗೌರವಾಧ್ಯಕ್ಷ ಜಿ.ಪಿ ವಿಶ್ವನಾಥ್, ಸತೀಶ್, ಸಾವಿತ್ರಮ್ಮ, ಧರ್ಮ ಬಿ.ಆರ್, ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಪರಮೇಶ್, ಉಪಾಧ್ಯಕ್ಷ ಲೋಕೇಶ್ ಕುಮಾರ್, ಆಲೂರು ತಾಲೂಕಿನ ನೌಕರರ ಅಧ್ಯಕ್ಷ ವರದರಾಜ್, ಸಂಘದ ಪದಾಧಿಕಾರಿಗಳು, ನಿರ್ದೇಶಕರು, ಸದಸ್ಯರು ಭಾಗವಹಿಸಿದ್ದರು.

# ಕೋಳಿ ಸಾಕಾಣಿಕೆ ರೈತರಿಗೆ ತಾತ್ಕಾಲಿಕ ಬೆಂಬಲ ಬೆಲೆ: ಶೀಘ್ರ ಜಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು : ರಾಜ್ಯದ ಕೋಳಿ ಸಾಕಾಣಿಕೆ ರೈತರಿಗೆ ಸರ್ಕಾರದಿಂದ ತಾತ್ಕಾಲಿಕ ಬೆಂಬಲ ಬೆಲೆ ಜಾರಿಗೆ ಬರಲಿದ್ದು, ಈ ಕುರಿತು ಶೀಘ್ರದಲ್ಲೇ ಅಧಿಕೃತ ಆದೇಶ ಹೊರಬರುವ ಸಾಧ್ಯತೆ ಇದೆ ಎಂದು ಪಶುಪಾಲನಾ ಇಲಾಖೆಯ ಆಯುಕ್ತೆ ಶಿಲ್ಪಾನಾಗ್ ತಿಳಿಸಿದ್ದಾರೆ.

ನಗರದ ಪಶುಪಾಲನಾ ಇಲಾಖೆಯ ಕಚೇರಿಯಲ್ಲಿ ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ಮುಖಂಡರೊಂದಿಗೆ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರೈತರ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು ತಾತ್ಕಾಲಿಕವಾಗಿ ಬೆಂಬಲ ಬೆಲೆಯನ್ನು ಸರ್ಕಾರದ ಮಟ್ಟದಲ್ಲಿ ನಿಗದಿಪಡಿಸಲಾಗಿದೆ ಎಂದು ತಿಳಿಸಿದರು.

ಈ ಸಂಬಂಧ ಮುಖ್ಯ ಕಾರ್ಯದರ್ಶಿ ಹಾಗೂ ಪಶು ಸಂಗೋಪನೆ ಸಚಿವ ಕೆ. ವೆಂಕಟೇಶ್ ಅವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅವರ ಅನುಮೋದನೆ ದೊರಕುತ್ತಿದ್ದಂತೆಯೇ ಬೆಂಬಲ ಬೆಲೆ ಜಾರಿಯಾಗಲಿದೆ ಎಂದು ಹೇಳಿದರು.

ಇನ್ನು ಶೀಘ್ರದಲ್ಲೇ ಸಮಿತಿ ಸಭೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅವರು ಮಾಹಿತಿ ನೀಡಿದರು.

ಸಭೆಯಲ್ಲಿ ಅಖಿಲ ಕರ್ನಾಟಕ ರಾಜ್ಯ ಕೋಳಿ ಸಾಕಾಣಿಕೆ ರೈತರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ (ಹಾಸನ), ಉಪಾಧ್ಯಕ್ಷರಾದ ಕುಮಾರಸ್ವಾಮಿ (ರಾಮನಗರ), ಧನಂಜಯ್ (ಮಂಡ್ಯ), ರಾಜ್ಯ ನಿರ್ದೇಶಕರಾದ ಲಕ್ಷ್ಮಿಕಾಂತ್ (ಕನಕಪುರ), ದಯಾನಂದ್ (ಮಾಲೂರು), ಮನ್ಮಥ್ ಗೌಡ, ಶ್ರೀಧರ್ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು.

# ಶಿಕ್ಷಣವೇ ಸಾಮಾಜಿಕ ಪರಿವರ್ತನೆಯ ಸಾಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಡಾ. ಬಿ. ಅರ್.ಅಂಬೇಡ್ಕರ್ ರವರ 135ನೇ ಜನ್ಮದಿನೋತ್ಸವದ ಅಂಗವಾಗಿ ದೇಶಾದ್ಯಂತ ಇಂದು ಸಂವಿಧಾನ ಶಿಲ್ಪಿ ಮಾನವತವಾದಿ ಡಾ. ಬಿಆರ್ ಅಂಬೇಡ್ಕರ್ ಅವರ ಜಯಂತಿಯನ್ನು ಆಚರಣೆ ಮಾಡುತ್ತಿದ್ದೇವೆ ನ್ಯಾಯ ಸಮಾನತೆ ಶಿಕ್ಷಣ ಮತ್ತು ಸಬಲೀಕರಣದ ಮೌಲ್ಯಗಳನ್ನು ನೆನಪಿಸುವ ಮಹತ್ವದ ದಿನವಾಗಿದೆ ಡಾ. ಬಿ ಆರ್.ಅಂಬೇಡ್ಕರ್ ಅವರು ಶಿಕ್ಷಣವೇ ಸಾಮಾಜಿಕ ಪರಿವರ್ತನೆಯ ಸಾಧನ ಎಂದು ತಿಳಿಸಿರುವುದು ನಮ್ಮೆಲ್ಲರಿಗೂ ಮಾರ್ಗದರ್ಶನವಾಗಿದೆ ಎಂದು ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಹೆಚ್.ಜೆ ಅಮರೇಂದ್ರ ರವರು ದಿನಾಂಕ 14- 4 2026 ರಂದು ಮಲೆನಾಡು ಇಂಜಿನಿಯರಿಂಗ್ ಕಾಲೇಜ್ ಆವರಣದಲ್ಲಿ ನಡೆದ ಡಾ.



ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನೋತ್ಸವದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮನಸ್ಸಿನ ಬೆಳವಣಿಗೆ ಮಾನವ ಜೀವನದ ಪ್ರಗತಿಯ ಗುರಿಯಾಗಬೇಕು, ನಾವು ಕೇವಲ ಜ್ಞಾನವನ್ನು ನಿಡುವುದರ ಜೋತೆಗೆ ಯುವ ಜನಾಂಗದವರಿಗೆ, ವಿದ್ಯಾರ್ಥಿಗಳಲ್ಲಿ ವ್ಯಕ್ತಿತ್ವ ವಿಮರ್ಶಾತ್ಮಕ ಚಿಂತನೆ ಮತ್ತು ಮಾನವೀಯತೆಯನ್ನು ಬೆಳೆಸುವ ಜವಾಬ್ದಾರಿಯು ನಮ್ಮ ಶಿಕ್ಷಕರ ಪಾತ್ರವಾಗಿದೆ ಸತ್ಯ ನಿಷ್ಠೆ ಗೌರವ ಮತ್ತು ಸಾಮಾಜಿಕ ಜವಾಬ್ದಾರಿಯ ಮೌಲ್ಯಗಳನ್ನು ಕಾಪಾಡುವುದು ಪ್ರತಿಯೊಬ್ಬರು ಆದ್ಯ ಕರ್ತವ್ಯವಾಗಿದೆ, ಎಲ್ಲರನ್ನೂ ಸಬಲರನ್ನಾಗಿ ಮಾಡುವ ವಾತಾವರಣವನ್ನು ನಿರ್ಮಿಸಲು ನಾವು ಪ್ರಯತ್ನಿಸಬೇಕು ಇದು ಡಾ. ಅಂಬೇಡ್ಕರ್ ಅವರ ಆದರ್ಶಗಳಿಗೆ ನಿಜವಾದ ಗೌರವ ನಿಡಿದಂತಾಗುವುದು, ಅವರ ಜೀವನದ ಹೋರಾಟ ದೃಢ ನಿಶ್ಚಯ ಮತ್ತು ದೇಶದ ಮೇಲಿನ ಅಪಾರ ಬದ್ಧತೆ ಪ್ರಮುಖವಾಗಿದೆ ಸಮಾನತೆಯ ಪ್ರೇರಣೆಯಿಂದ ನಾವು ನಮ್ಮ ಕರ್ತವ್ಯಗಳನ್ನು ಇನ್ನಷ್ಟು ನಿರ್ವಹಿಸೋಣ ಎಂದು ಡಾ ಬಿ ಅರ್ ಅಂಬೇಡ್ಕರ್ ಜನ್ಮದಿನೋತ್ಸವ ಕಾರ್ಯಕ್ರಮದಲ್ಲಿ ಸುಸಂದರ್ಭದಲ್ಲಿ ತಿಳಿಸಿದರು

ಮುಖ್ಯ ಅತಿಥಿಗಳಾಗಿದ್ದ ಕಾಲೇಜಿನ ನಿರ್ದೇಶಕರಾದ ಡಾ. ಎಸ್. ಪ್ರದೀಪ್ ಮಾತನಾಡಿ ಡಾ. ಬಿ ಆರ್ ಅಂಬೇಡ್ಕರ್ ಅವರು ಸಮಾನತೆಯ ಮತ್ತು ಪ್ರಗತಿಯ ಸಮಾಜ ನಿರ್ಮಾಣದ ದಿಕ್ಕಿನಲ್ಲಿ ಸಂಪೂರ್ಣ ಪ್ರಯತ್ನವನ್ನ ಹಾಕಿದ್ದಾರೆ, ಮೇಲು ಕೀಳು ಎಂಬ ಭಾವನೆ ಇಲ್ಲದೆ ಎಲ್ಲರೂ ಸಮಾನಾಂತರವಾಗಿ ಬದುಕುವುದು ಅಂಬೇಡ್ಕರ್ ಅವರ ಉದ್ದೇಶವಾಗಿತ್ತು ಎಂದರು.

ಮಲ್ನಾಡ್ ಇಂಜಿನಿಯರಿಂಗ್ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಹಾಗೂ ಪ್ರಾಧ್ಯಾಪಕರು ಆದ ಡಾ. ಎ. ಜೆ.ಕೃಷ್ಣಯ್ಯನವರು ಮಾತನಾಡಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನವನ್ನು ರಚನೆ ಮಾಡಲು ಬಹಳಷ್ಟು ಹೋರಾಟ ಮಾಡಿದ್ದಾರೆ ಹಾಗೂ ಬಡತನದಲ್ಲಿರುವವರನ್ನು ಮೇಲ್ಮಟ್ಟಕ್ಕೆ ತರುವಂತಹ ಕೆಲಸ ಆಗಬೇಕೆಂದು ಅವರ ಗುರಿಯಾಗಿದ್ದು ಶೈಕ್ಷಣಿಕವಾಗಿ ಸಾಮಾಜಿಕವಾಗಿ ರಾಜಕೀಯವಾಗಿ ಆರ್ಥಿಕವಾಗಿ ಎಲ್ಲರೂ ಸಮಾನತೆಯ ದೃಷ್ಟಿಯಿಂದ ಬದುಕನ್ನು ಕಾಣಬೇಕೆಂಬುದು ಅಂಬೇಡ್ಕರ್ ಅವರ ಗುರಿಯಾಗಿತ್ತು ಎಂದರು.

ಸಂವಿಧಾನ ಇರಾಲಾಗಿ ಎಲ್ಲರೂ ಸಮಾನತೆಯ ಬದುಕು ಕಾಣಲು ಸಾಧ್ಯವಾಗಿದೆ ಎಂದರು

ಕಾರ್ಯಕ್ರಮದಲ್ಲಿ ಕಾಲೇಜಿನ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ಅಧಿಕಾರಿ ಡಾ, ಇಂದ್ರ ಬಹದ್ದೂರ್, ಕಾಲೇಜು ಎನ್ ಎಸ್ ಎಸ್ ಅಧೀಕಾರಿಗಳಾದ ಡಾ ವೀಜಯಕುಮಾರ್ ತೀಲೆ, ಪರಿಕ್ಷಾ ವಿಭಾಗದ ಮುಖ್ಯ ಸ್ಥರಾದ ಡಾ. ಎ. ಎ. ಪ್ರಸನ್ನ, ವಿಭಾಗದ ಮುಖ್ಯ ಸ್ಥರುಗಳಾದ ಡಾ. ರಾಜಣ್ಣ, ಡಾ, ಹರೀಶ್, ಡಾ, ಸುಮನ ಜಯಪ್ರಕಾಶ್, ಕಾಲೇಜು ರಿಜಿಸ್ಟ್ರಾರ್ ಕುಮುದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೇಯ ಮಾಧ್ಯಮ ಸಂಯೋಜಕರಾದ ಕಟ್ಟಾಯ ಶಿವಕುಮಾರ್, ಪ್ರಾದ್ಯಾಪಕರಾದ ಡಾ. ಮೂರ್ತಿ ಮಹದೇವ್ ನಾಯಕ್, ಡಾ ತ್ರೀವೇಣಿ, ಡಾ ಶಂಭುಲಿಂಗ ಮೂರ್ತಿ . ಡಾ.ವೆಂಕಟೇಶ್ ರಾವ್ ಕೋಲ್ಲಿ,

ಹಾಗೂ ಕಾಲೇಜಿನ ಡೀನ್ ರವರು, ಎಲ್ಲಾ ವಿಭಾಗದ ಮುಖ್ಯಸ್ಥರುಗಳು ಪ್ರಾಧ್ಯಾಪಕರು, ಸಹಪ್ರಾಧ್ಯಪಕರು, ನೌಕರರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು

ಡಾ. ಬಿ. ಅರ್ ಅಂಬೇಡ್ಕರ್ ರವರ ಬಾವಚೀತ್ರಕ್ಕೆ ಪುಷ್ಪಾರ್ಚನೆಯನ್ನು ಎಲ್ಲಾರು ಸಲ್ಲಿಸಿದರು,

ಕಾರ್ಯಕ್ರಮದ ಕೊನೆಯಲ್ಲಿ ವಿಶ್ವ ಶಾಂತಿಗಾಗಿ ಪ್ರಾಥನೆ ಮಾಡಲಾಯಿತು.


ಕಾರ್ಯಕ್ರಮದ ಮುಗಿದ ನಂತರ ಎಲ್ಲರಿಗೂ ಸಿಹಿವಿತರಣೆ ಮಾಡಲಾಯಿತು.

# ಗಮನ ಸೆಳೆದ ಮಾತುಕತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೆಂಗಳೂರು: ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನಲ್ಲಿರುವ ಆದಿಚುಂಚನಗಿರಿಯ ಶ್ರೀಗುರು ಭೈರವೈಕ್ಯ ಮಂದಿರ ಉದ್ಘಾಟನೆಗೆ ಆಗಮಿಸಿದ ಪ್ರಧಾನಿ ನರೇಂದ್ರಮೋದಿ ಅವರು, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಜೊತೆ ನಡೆಸಿದ ಮಾತುಕತೆ ಎಲ್ಲರ ಗಮನಸೆಳೆಯಿತು.

ಬೆಟ್ಟದ ತಪ್ಪಲಿನಲ್ಲಿರುವ ಭೈರವೈಕ್ಯ ಮಂದಿರವನ್ನು ಲೋಕಾರ್ಪಣೆಗೊಳಿಸಿ, ಬಿಜಿಎಸ್ ಕ್ರೀಡಾಂಗಣದಲ್ಲಿ ಹಮಿಕೊಂಡಿದ್ದ ಕಾರ್ಯಕ್ರಮದ ವೇದಿಕೆಗೆ ಆಗಮಿಸುತ್ತಿದ್ದಂತೆ ಕುರ್ಚಿಯಲ್ಲಿ ಆಸೀನರಾಗಿದ್ದ ದೇವೇಗೌಡರಿಗೆ ಮೋದಿಯವರು ಹಸ್ತಲಾಘವ ಮಾಡಿ, ಯೋಗಕ್ಷೇಮ



ವಿಚಾರಿಸಿದರು. ಪರಸ್ಪರ ಇಬ್ಬರೂ ನಾಯಕರು ಉಭಯ ಕುಶಲೋಪರಿ ನಡೆಸಿದರು.

ವೇದಿಕೆ ಮೇಲೆ ಮೋದಿ ಮತ್ತು ದೇವೇಗೌಡರ ನಡುವೆ ನಡೆದ ಈ ಸಂಭಾಷಣೆ ನೆರೆದಿದ್ದ ಎಲ್ಲರ ಗಮನ ಸೆಳೆಯಿತು ಹಾಗೂ ಕುತೂಹಲಕ್ಕೆ ಎಡೆ ಮಾಡಿಕೊಟ್ಟಿತು. ನಂತರ ಭಾಷಣ ಮಾಡುವ ಸಂದರ್ಭದಲ್ಲೂ ಮೋದಿಯವರು ದೇವೇಗೌಡರ ಕೈ ಹಿಡಿದುಕೊಂಡು ಕೆಲಹೊತ್ತು ಮಾತುಕತೆ ನಡೆಸಿದ್ದು ವಿಶೇಷವಾಗಿತ್ತು.

ಇನ್ನು ಭಾಷಣದಲ್ಲೂ ದೇವೇಗೌಡರನ್ನು ಹಾಡಿಹೊಗಳಿದ ಮೋದಿ, ಇಡೀ ವಿಶ್ವಕ್ಕೆ ರಾಗಿ ಮುದ್ದೆ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಹೀಗಾಗಿ ಯುವಕರು ಹೆಚ್ಚು ಹೆಚ್ಚು ರಾಗಿ ಮುದ್ದೆಯನ್ನು ಸೇವಿಸಲು ಕರೆಕೊಟ್ಟರು.

# ಅಂಬೇಡ್ಕರ್ ಅವರ ಜಾತಿ ವಿನಾಶ ಕೃತಿಯ ಸಾಮೂಹಿಕ ಓದು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಡಿಎಚ್‌ಎಸ್, ಎಸ್‌ಎಫ್‌ಐ, ಡಿವೈಎಫ್‌ಐ, ಬಿಜಿವಿಎಸ್, ಸಿಐಟಿಯು, ಜೆಎಂಎಸ್, ಕೆ.ಪಿ.ಆರ್.ಎಸ್ ಸಂಘಟನೆಗಳ ಆಶ್ರಯದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ 135ನೇ ಜಯಂತಿ ಅಂಗವಾಗಿ ಅಂಬೇಡ್ಕರ್ ಅವರ ಜಾತಿ ವಿನಾಶ ಕೃತಿಯ ಸಾಮೂಹಿಕ ಓದು ಮತ್ತು ಸಮಕಾಲೀನ ವಿಶ್ಲೇಷಣೆಯನ್ನು ನಗರದ ಆರ್.ಸಿ ರಸ್ತೆಯಲ್ಲಿರುವ ಶ್ರಮ ಕಚೇರಿಯಲ್ಲಿ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಲೇಖಕ ಕೆ.ಎಸ್ ರವಿಕುಮಾರ್, ಭಾರತದಲ್ಲಿರುವ ಅನಾಗರೀಕ ಜಾತಿ ವ್ಯವಸ್ಥೆ ಬೇರೆ ಯಾವ ದೇಶದಲ್ಲೂ ಇಲ್ಲ. ಮಾನವ ಸಮಾಜದಲ್ಲಿ ದ್ವೇಷ, ಅಸೂಯೆ, ಶೋಷಣೆ ಮತ್ತು ಅಸಮಾನತೆ ಸೃಷ್ಟಿಸಿರುವ ಜಾತಿ ಪದ್ಧತಿ ಅತ್ಯಂತ ಅವೈಜ್ಞಾನಿಕವಾಗಿದೆ ಎಂದರು.



ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಸ್ವತಃ ಇದರಿಂದ ಶೋಷಣೆ ಅವಮಾನ ಅನುಭವಿಸಿ ಜಾತಿ ಅಸ್ಪೃಶ್ಯತೆ ವಿರುದ್ಧ ನಿರಂತರವಾಗಿ ಹೋರಾಟ ನಡೆಸಿದರು. ಅವರು ಬುದ್ಧ, ಜ್ಯೋತಿ ಬಾ ಫುಲೆ ಮತ್ತು ಸಂತ ಕಬೀರರ ವಿಚಾರಗಳಿಂದ ಹೆಚ್ಚು ಪ್ರಭಾವಿತರಾಗಿ ಜಾತಿ ವಿನಾಶ ಗೊಳಿಸುವುದೇ ಅವರ ಅಂತಿಮ ಗುರಿಯಾಗಿತ್ತು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕೆ.ಪಿ.ಆರ್.ಎಸ್ ಜಿಲ್ಲಾ ಕಾರ್ಯದರ್ಶಿ ಎಚ್. ಆರ್ ನವೀನ್ ಕುಮಾರ್, ಅಸ್ಪೃಶ್ಯತೆ, ಜಾತಿ ತಾರತಮ್ಯಗಳ ವಿರುದ್ಧ ನಿರಂತರ ಕಾರ್ಯಕ್ರಮ ನಡೆಸಲಾಗುವುದೆಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್, ಅಂಬೇಡ್ಕರ್ ಅವರು ಜಾತಿ ವಿನಾಶ ಕೃತಿ ರಚಿಸಿ 90 ವರ್ಷಗಳಾಗಿವೆ. ದೇಶಕ್ಕೆ ಉತ್ತಮ ಸಂವಿಧಾನ ರಚಿಸಿಕೊಟ್ಟಿದ್ದಾರೆ. ಇಂದು ಜಾತೀಯತೆ ಆಳವಾಗಿ ಬೇರೂರುತ್ತಾ, ಅಸ್ಪೃಶ್ಯತೆ ಬೇರೆ ಬೇರೆ ಆಯಾಮಗಳಲ್ಲಿ ಸಮಾಜವನ್ನು ಆವರಿಸಿದೆ.

ಸಮಾಜ ವಿಭಜಿಸುವ ಅಮಾನವೀಯ ಮನುಸ್ಮೃತಿ ಆಡಳಿತ ಚಾಲ್ತಿಯಲ್ಲಿದ್ದು, ಸಂವಿಧಾನವನ್ನೇ ಅಪಮೌಲ್ಯ ಗೊಳಿಸಲಾಗುತ್ತಿದೆ.

ಇಂತಹ ಸಂಧರ್ಭದಲ್ಲಿ ಅಂಬೇಡ್ಕರ್ ಜಾತಿ ವಿನಾಶ ಕೃತಿಯು ಜಾತಿ ವ್ಯವಸ್ಥೆಯನ್ನು ಪೋಷಿಸುತ್ತಿರುವ ಪುರೋಹಿತಶಾಹಿ, ಬಂಡವಾಳಶಾಹಿ ಮನುವಾದಿಗಳ ವಿರುದ್ಧದ ಪ್ರಮುಖ ಅಸ್ತ್ರವನ್ನಾಗಿಸಿಕೊಂಡು ಪ್ರಬಲವಾದ ಜಾತಿವಿನಾಶದ ಚಳುವಳಿ ಕಟ್ಟಬೇಕಾಗಿದೆ.

ದಲಿತ ಮುಖಂಡರಾದ ಕೃಷ್ಣದಾಸ್ ಮತ್ತು ಮಾದಿಗ ದಂಡೋರ ಮುಖಂಡ ಟಿ.ಆರ್ ವಿಜಯ್ ಕುಮಾರ್ ಮಾತನಾಡಿದರು.

ಅಂಬೇಡ್ಕರ್ ಅವರ ಜಾತಿ ವಿನಾಶ ಕೃತಿಯ ಓದು ಹಾಗೂ ಸಮಕಾಲೀನ ವಿಶ್ಲೇಷಣೆ ಕಾರ್ಯಕ್ರಮ ಉತ್ತಮ ಅರ್ಥಪೂರ್ಣ ಕಾರ್ಯಕ್ರಮ.ಇದನ್ನು ಇನ್ನೂ ಹೆಚ್ಚು ಇಂದಿನ ತಲೆಮಾರಿನ ಯುವಜನರ ನಡುವೆ ವಿಸ್ತರಿಸಬೇಕೆಂದು ಅಭಿಪ್ರಾಯ ಪಟ್ಟರು.

ಡಿಎಚ್‌ಎಸ್ ಜಿಲ್ಲಾ ಸಂಚಾಲಕ ಎಂ.ಜಿ ಪೃಥ್ವಿ ಕಾರ್ಯಕ್ರಮ ನಿರ್ವಹಿಸಿದರು.

ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಅವರ ಜಾತಿ ವಿನಾಶ ಕೃತಿಯನ್ನು ಸಾಮೂಹಿಕವಾಗಿ ಸಂಜೆವರೆಗೆ ಸಂಪೂರ್ಣವಾಗಿ ಓದಿ, ಸಮಕಾಲೀನ ಸಂದರ್ಭಕ್ಕೆ ವಿಶ್ಲೇಷಣೆ ಮಾಡಲಾಯಿತು. ಸಾಹಿತಿ ಹರೀಶ್ ಕಟ್ಟೆ ಬೆಳಗುಲಿ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ ಪುಷ್ಪ, ಉಪನ್ಯಾಸಕ ಹಾಗೂ ಚಿಂತಕರಾದ ರೋಹಿತ್ ಅಗಸರಹಳ್ಳಿ, ಅಹಮದ್ ಹಗರೆ., ಡಿವೈಎಫ್‌ಐ ಮುಖಂಡರಾದ ಶಶಿ ತಟ್ಟೆಕೆರೆ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ರಮೇಶ್, ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿ ಚನ್ನೇನಹಳ್ಳಿ ಸ್ವಾಮಿ, ಜಗದೀಶ್ ಬಾಬು, ಮುನಿಸ್ವಾಮಿ ಸೇರಿ ಹಲವರಿದ್ದರು.

# ಡಿ.ಎಸ್.ಎಸ್ ವತಿಯಿಂದ ಅಂಬೇಡ್ಕರ್ ಜಯಂತಿ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**





ಅರೇಹಳ್ಳಿ : ಅರೇಹಳ್ಳಿ ಹೋಬಳಿ ಹಿರಿಗರ್ಜೆ ಗ್ರಾಮದಲ್ಲಿ ಮೊದಲ ಬಾರಿಗೆ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ವಿಚಾರ ವೇದಿಯಿಂದ ಆಯೋಜನೆ ಮಾಡಿದ್ದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ 135ನೇ ಜನ್ಮ ಜಯಂತಿ ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ಮಂಗಳವಾರ ಸಂಜೆ ಜರುಗಿತು.

ಇದೇ ಮೊದಲ ಬಾರಿಗೆ ಅಂಬೇಡ್ಕರ್ ಯುವಕರ ಸಂಘ ಹಾಗೂ ಗ್ರಾಮಸ್ಥರು ವ್ಯವಸ್ಥಿತವಾಗಿ ಕಾರ್ಯಕ್ರಮ ಆಯೋಜನೆ ಮಾಡುವ ಮೂಲಕ ಇತರ ಗ್ರಾಮಗಳಿಗೆ ಮಾದರಿಯಾಗಿದ್ದಾರೆ. ಇಡೀ ಗ್ರಾಮವನ್ನೇ ನೀಲಿಮಯ ಮಾಡಿದ್ದರು. ಅಂಬೇಡ್ಕರ್ ಭಾವಚಿತ್ರವನ್ನು ಗ್ರಾಮದ ರಾಜ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಡೊಳ್ಳು ಸದ್ದಿಗೆ ಯುವಕರು, ಮಹಿಳೆಯರು, ಮಕ್ಕಳು ಕುಣಿದು ಕುಪ್ಪಳಿಸುವ ಮೂಲಕ ಸಂಭ್ರಮಿಸಿದರು. ನಂತರ ಗ್ರಾಮದಲ್ಲಿ ಅಚ್ಚು ಕಟ್ಟಾದ ವೇದಿಕೆ ನಿರ್ಮಿಸಿ ಕಾರ್ಯಕ್ರಮವನ್ನು ಅರ್ಥ ಪೂರ್ಣಗೊಳಿಸಿದರು.

ವೇದಿಕೆಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಅರೇಹಳ್ಳಿ ನಿಂಗರಾಜ್, ಇಡೀ ಗ್ರಾಮ ಏಪ್ರಿಲ್ 14 ರಂದು ಪ್ರತಿಯೊಬ್ಬ ಭಾರತೀಯನಿಗೂ ಮಹತ್ವದ ದಿನವಾಗಿದ್ದು, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ಮಹಿಳೆಯರ ಪ್ರಗತಿ ಹಾಗೂ ಸಮಾಜದ ಏಳಿಗೆಯ ಕನಸು ಕಂಡ ಅಂಬೇಡ್ಕರ್ ಅವರು ಅಸಮಾನತೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡಿ ಸಮಾನತೆಯ ಆಧಾರದ ಮೇಲೆ ಭವ್ಯ ಭಾರತ ನಿರ್ಮಾಣಕ್ಕೆ ಶ್ರಮಿಸಿದರು ಎಂದು ತಿಳಿಸಿದರು.

ಅಸ್ಪೃಶ್ಯ ಸತ್ಯಾಗ್ರಹಗಳಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರೆ, ಸವರ್ಣೀಯರಿಂದ ಹಿಂಸಾತ್ಮಕ ಪ್ರತಿಕ್ರಿಯೆಗಳು ಎದುರಿಸಲ್ಪಟ್ಟವು. ಚೌಡಾರ್ ಕೆರೆಯ ಚಳುವಳಿ ನ್ಯಾಯಾಲಯದ ಮೂಲಕ ಅಂತಿಮವಾಗಿ ಕೆಳವರ್ಗಗಳ ಪರವಾಗಿ ಜಯ ಸಾಧಿಸಿತು ಎಂದು ಅಂಬೇಡ್ಕರ್ ಹೋರಾಟಗಳ ಬಗ್ಗೆ ವಿವರಿಸಿದರು.

ಅಸ್ಪೃಶ್ಯತೆ ಮತ್ತು ಅಸಮಾನತೆಯ ಮೂಲ ಕಾರಣ 'ಮನುಸ್ಮೃತಿ' ಎಂದು ಅಂಬೇಡ್ಕರ್ ನಂಬಿದ್ದರು. ಭಾರತೀಯ ಸಂವಿಧಾನವು ದೇಶದ ಪವಿತ್ರ ಗ್ರಂಥವಾಗಿದ್ದು, ಪ್ರಜಾಪ್ರಭುತ್ವಕ್ಕೆ ಅರ್ಥ ನೀಡಿದ ಮಹತ್ವದ ದಸ್ತಾವೇಜು ಎಂದರು. ಬಾಲ್ಯದಲ್ಲೇ ಅಸಮಾನತೆ ಅನುಭವಿಸಿದ ಅಂಬೇಡ್ಕರ್ ಅವರು ಬಳಿಕ ವಿಶ್ವಪ್ರಸಿದ್ಧ ನಾಯಕರಾಗಿ ಹೊರಹೊಮ್ಮಿ ಸ್ವಾಭಿಮಾನದ ಬದುಕಿಗೆ ದಾರಿ ತೋರಿದ ಮಹಾನ್ ವ್ಯಕ್ತಿಯಾಗಿದ್ದಾರೆ ಎಂದು ಕೊಂಡಾಡಿದರು.

ಹಿಂದುಳಿದ ವರ್ಗಗಳ ಹಕ್ಕಿಗಾಗಿ ಜೀವನವನ್ನೇ ಅರ್ಪಿಸಿದ ಅವರು ಸ್ವಾತಂತ್ರ್ಯ ಸಮಾನತೆ ಮತ್ತು ಬಾಂಧವ್ಯದ ಆಧಾರದ ಮೇಲೆ ಜಾತ್ಯಾತೀತ ಹಾಗೂ ಸಮಾಜವಾದಿ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಅವರ ಕನಸಿನ ಭಾರತ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸ ಬೇಕು ಎಂದು ಕರೆ ನೀಡಿದರು.

ವೈಚಾರಿಕ ಸಂಜೆ ದಿನಪತ್ರಿಕೆ ವೆಂಕಟೇಶ್ ಬ್ಯಾಕರವಳ್ಳಿ ಮಾತನಾಡಿ ಅಂಬೇಡ್ಕರ್ ಅವರ ಚಿಂತನೆಗಳನ್ನು ಗಂಭೀರವಾಗಿ ಅರ್ಥಮಾಡಿಕೊಳ್ಳಬೇಕು. ಅವರು ಬರೆದಿರುವ ಗ್ರಂಥಗಳು ಅಪಾರವಾಗಿದ್ದು, ಜೀವನಪೂರ್ತಿ ಓದಿದರೂ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಅವುಗಳನ್ನು ಹಂತಹಂತವಾಗಿ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು ಎಂದ ಅವರು ಅಂಬೇಡ್ಕರ್ ಒಂದು ಸಮುದಾಯಕ್ಕೆ ಸೀಮಿತವಲ್ಲದೆ, ಎಲ್ಲ ವರ್ಗದ ಬಡವರ, ಶೋಷಿತರ, ಅಸಹಾಯಕರ ಹಿತಕ್ಕಾಗಿ ಶ್ರಮಿಸಿದ ಮಹಾನ್ ವ್ಯಕ್ತಿ ಎಂದು ಹೇಳಿದರು.

ಅಂಬೇಡ್ಕರ್ ಅವರನ್ನು ಮರೆತರೆ



ಸಮಾಜದ ಪ್ರಗತಿ ಸಾಧ್ಯವಿಲ್ಲ. ನಗರ ಪ್ರದೇಶಗಳಲ್ಲಿ ನೋಡುತ್ತಿದ್ದ ಅಂಬೇಡ್ಕರ್ ಜಯಂತೋತ್ಸವ ಗ್ರಾಮಮಟ್ಟ ದವರೆಗೆ ಬೆಳೆದು ಬಂದಿರುವುದು ನಿಜಕ್ಕೂ ಹೆಮ್ಮೆಯ ವಿಚಾರವಾಗಿದೆ .ಅವರ ಜಯಂತಿ ಆಚರಣೆಯ ಉದ್ದೇಶವೇ ಮುಂದಿನ ಯುವಪೀಳಿಗೆಗೆ ಅವರ ತತ್ವ ಆದರ್ಶಗಳನ್ನು ಪರಿಚಯಿಸುವುದು ಎಂದರು.ಅಂಬೇಡ್ಕರ್ ಜಯಂತಿ ಆಚರಣೆ ಜೊತೆಗೆ ಗ್ರಾಮಗಳಲ್ಲೂ ಬದಲಾವಣೆ ಕಾಣಬೇಕು ಎಂದು ತಿಳಿಸಿದರು. ಅರೇಹಳ್ಳಿ ಹೋಬಳಿ ಹಿರಿಗರ್ಜೆ ಗ್ರಾಮದಲ್ಲಿ ಗ್ರಾಮಸ್ಥರು ಮೊದಲ ಬಾರಿಗೆ ಆಯೋಜಿಸಿದ್ದ ಅಂಬೇಡ್ಕರ್ ರವರ 135ನೇ ಜಯಂತೋತ್ಸವ ನಿಜಕ್ಕೂ ಅರ್ಥಪೂರ್ಣವಾಗಿದೆ ಎಂದು ಶ್ಲಾಘಿಸಿದರು. ಕಡೆಗರ್ಜೆ ಲೋಹಿತ್ ಅಂಬೇಡ್ಕರ್ ಅವರ ವಿಚಾರಗಳು -ಹೋರಾಟದ ಬಗ್ಗೆ ಕೆಲಮೊಂದು ಉದಾಹರಣೆಗಳ ನೀಡುವ ಮೂಲಕ ಗ್ರಾಮಸ್ಥರಿ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕರುನಾಡ ವಿಜಯ ದಿನಪತ್ರಿಕೆ ಸಂಪಾದಕ ಚಂದನ್‌ಗೌಡ, ಮಾಜಿ ಗ್ರಾಮ ಪಂಚಾಯತಿ ಸದಸ್ಯ ಕುಮಾರ್ ,ಮಂಜುನಾಥ್, ದಿನೇಶ್ ,ಗೋಪಾಲ,ಅಂಗನವಾಡಿ ಶಿಕ್ಷಕಿ ಜ್ಯೋತಿ , ಸಂಗಯ್ಯ , ಸಿದ್ದರಾಜು, ದಿನೇಶ್, ಪುಟ್ಟಯ್ಯ , ನವೀನ್, ಅಂಬೇಡ್ಕರ್ ಯುವಕರ ಸಂWದ ನೂರಾರು ಗ್ರಾಮಸ್ಥರು ಉಪಸ್ಥಿತರಿದ್ದರು.ರತೀಶ್ ಸ್ವಾಗತಿಸಿದರು. ಶಿಕ್ಷಕಿ ಪ್ರೀತಿ ನಿರೂಪಿಸಿದರು. ಗ್ರಾಮಸ್ಥರಿಗೆ ಅಚ್ಚುಕಟ್ಟಾದ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು.

# ಸಂಸದರಿಂದ ಸವಲತ್ತು ವಿತರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಂಸದ ಶ್ರೇಯಸ್ ಪಟೇಲ್ ಅವರು, ತಮ್ಮ ಲೋಕಸಭಾ ಸದಸ್ಯರ ಅನುದಾನದಲ್ಲಿ ವಿವಿಧ ರೀತಿಯ ಅಬಲರಿಗೆ ಅನುಕೂಲವಾಗುವ ಬೈಕ್, ಶ್ರವಣ ಸಾಧನ ಮೊದಲಾದ ಸವಲತ್ತು ವಿತರಿಸಿದರು.

ನಗರದ ಜಿಲ್ಲಾ ಪಂಚಾಯ್ತಿ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚನ್ನರಾಯಪಟ್ಟಣ ತಾಲೂಕು ದಂಡಿಗನಹಳ್ಳಿ ಹೋಬಳಿ ಎ.ಕಾಳೇನಹಳ್ಳಿ ಗ್ರಾಮದ ಕು.ಚಂದನ ಅವರಿಗೆ ಶ್ರವಣ ಸಾಧನ ಯಂತ್ರೋಪಕರಣ ವಿತರಿಸಿದರು.

ಹೊಳೆನರಸೀಪುರ ಪಟ್ಟಣದ ವಾರ್ಡ್ ನಂಬರ್ 17 ಕಾರಂಜಿ ಕಟ್ಟೆ ಬಡಾವಣೆಯ ಗೋವಿಂದಯ್ಯ ಅವರಿಗೆ ಶ್ರವಣ ಸಾಧನ ಯಂತ್ರೋಪಕರಣ ಹಂಚಿಕೆ ಮಾಡಿದರು.

ಇದೇ ತಾಲೂಕಿನ ದೊಡ್ಡ ಕಾಡನೂರು ಗ್ರಾಮದ ಮಹೇಶ್ ಎಂ.ಅವರಿಗೆ ತ್ರಿಚಕ್ರ ವಾಹನ ಮತ್ತು ಹಾಸನ ತಾಲೂಕು ಚಿಕ್ಕಗೇಣಿಗೆರೆ ಗ್ರಾಮದ ಸಂಪತ್ ಕುಮಾರ್ ಅವರಿಗೆ ತ್ರಿಚಕ್ರ ವಾಹನ ಹಂಚಿಕೆ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷರೂ ಆದ ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು.

## ದಲಿತ ವಿರೋಧಿ ಘೋಷಣೆ

ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಎ. ಮಂಜು ವಿರುದ್ಧ ದಲಿತ ವಿರೋಧಿ ಶಾಸಕ ಎನ್ನುವ ದಿಟ್ಟ ಆರೋಪದ ಸುರಿಮಳೆ ದಿಗ್ಭಮೆ ಮೂಡಿಸಿತು. ಎ. ಮಂಜು ದಲಿತರ ಬಗ್ಗೆ ಪುಂಕಾನುಪುಂಕವಾಗಿ ಭಾಷಣ ಮಾಡುತ್ತಿದ್ದ ವೇಳೆ ಎದ್ದುನಿಂತ ಮಳಲಿಕೆರೆ ನಟರಾಜ ಎನ್ನುವ ದಲಿತ ಮುಖಂಡ ಎದ್ದು ನಿಂತು ನೀವು ದಲಿತ ವಿರೋಧಿ ಶಾಸಕ ಎಂದು ಗದ್ದಲ ಎಬ್ಬಿಸಿದಾಗ ಕಾರ್ಯಕ್ರಮ ಗದ್ದಲದ ಗೂಡಾಯಿತು. ನಾನು ನಿನಗೂ ನಿಮ್ಮ ತಾಯಿಗೂ ವೈಯಕ್ತಿಕವಾಗಿ ಸಹಾಯ ಮಾಡಿದ್ದೇನೆ, ನಾನು ಇದೆಲ್ಲ ನೋಡಿ ರಾಜಕೀಯಕ್ಕೆ ಬಂದವನು, 25 ವರ್ಷದ ಹಿಂದಕ್ಕೆ ಹೋದರೆ ಊಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಎದಿರೇಟು ನೀಡಿ ಎಚ್ಚರಿಸಿದರು.

# ದ್ವಿತೀಯ ಪಿಯುಸಿ ಫಲಿತಾಂಶ

## ಜಾವಗಲ್ ಸರ್ಕಾರಿ ಪದವಿಪೂರ್ವ ಕಾಲೇಜಿಗೆ ಅಭೂತಪೂರ್ವ ಯಶಸ್ಸು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಜಾವಗಲ್: ಇತ್ತೀಚೆಗೆ ಪ್ರಕಟವಾದ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಜಾವಗಲ್‌ನ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡುವ ಮೂಲಕ ಗ್ರಾಮೀಣ ಭಾಗದ ವಿದ್ಯಾರ್ಥಿಗಳೂ ವಿಜ್ಞಾನ ವಿಭಾಗ ಹಾಗೂ ಆಂಗ್ಲ ಮಾಧ್ಯಮದಲ್ಲಿ ಮಿಂಚಬಲ್ಲರು ಎಂಬುದನ್ನು ಸಾಬೀತುಪಡಿಸಿದ್ದಾರೆ.

ವಿಶೇಷವೆಂದರೆ, ಭೂಗೋಳಶಾಸ್ತ್ರ ವಿಷಯದಲ್ಲಿ ಮೂವರು ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಗಳಿಸಿದ್ದಾರೆ. ಈ ಮೂಲಕ ಸತತವಾಗಿ 6ನೇ ವರ್ಷ ನೂರಕ್ಕೆ ನೂರರಷ್ಟು ಫಲಿತಾಂಶ ಬಂದಿದೆ. ಅಲ್ಲದೆ ಕನ್ನಡ, ಸಮಾಜಶಾಸ್ತ್ರ, ಲೆಕ್ಕಶಾಸ್ತ್ರ, ಭೂಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಜೀವಶಾಸ್ತ್ರ ಸೇರಿದಂತೆ ಒಟ್ಟು 8 ವಿಷಯಗಳಲ್ಲಿ ಶೇ. 100 ರಷ್ಟು ಫಲಿತಾಂಶ ದಾಖಲಾಗಿದೆ.

ಈ ಕುರಿತು ಮಾಹಿತಿ ಹಂಚಿಕೊಂಡ ಕಾಲೇಜಿನ ಪ್ರಾಚಾರ್ಯರಾದ ಉಮೇಶ್ ಹೊಸಹಳ್ಳಿ ಅವರು, "ನಮ್ಮ ಕಾಲೇಜು ಗ್ರಾಮೀಣ ಮಕ್ಕಳ ಕಲಿಕೆಗೆ ಭದ್ರವಾದ ಮೆಟ್ಟಿಲಾಗಿದೆ. ವಿಶೇಷವಾಗಿ ವಿಜ್ಞಾನ ವಿಭಾಗದಲ್ಲಿ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದು ಹೆಮ್ಮೆಯ ವಿಷಯ. ಕಾಲೇಜಿನಲ್ಲಿ ಸುಸಜ್ಜಿತ ಕೊಠಡಿಗಳು, ಸುಧಾರಿತ ಪ್ರಯೋಗಾಲಯ ಹಾಗೂ ಗ್ರಂಥಾಲಯದ ಸೌಲಭ್ಯಗಳಿದ್ದು, ಉಪನ್ಯಾಸಕರು ಮತ್ತು ಕಾಲೇಜು ಅಭಿವೃದ್ಧಿ ಸಮಿತಿಯ ಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ" ಎಂದು ತಿಳಿಸಿದ್ದಾರೆ.

ಗ್ರಾಮೀಣ ಭಾಗದ ಪೋಷಕರು ತಮ್ಮ ಮಕ್ಕಳನ್ನು ಗುಣಮಟ್ಟದ ಶಿಕ್ಷಣಕ್ಕಾಗಿ ಸರ್ಕಾರಿ ಕಾಲೇಜಿಗೆ ದಾಖಲಿಸಿ, ಈ ಸೌಲಭ್ಯಗಳ ಸದುಪಯೋಗ ಪಡಿಸಿಕೊಳ್ಳಬೇಕೆಂದು ಅವರು ಇದೇ ಸಂದರ್ಭದಲ್ಲಿ ಕೋರಿದ್ದಾರೆ.



ಯಶಸ್ವಿನಿ, ಕಲಾವಿಭಾಗ 600/550



ರಮ್ಯ, ಕಲಾವಿಭಾಗ 600/550



ಸಾನಿಯ ಭಾನು, ವಾಣಿಜ್ಯ 600/547



ಸ್ವಾತಿ , ವಿಜ್ಞಾನ ವಿಭಾಗ 600/543

### ಫಲಿತಾಂಶದ ಮುಖ್ಯಾಂಶಗಳು

ಕಾಲೇಜಿನ ಒಟ್ಟಾರೆ ಶೇಕಡಾವಾರು ಫಲಿತಾಂಶ 85% ಬಂದಿದ್ದು, ಪರೀಕ್ಷೆಗೆ ಹಾಜರಾದ 94 ವಿದ್ಯಾರ್ಥಿಗಳಲ್ಲಿ 79 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಾಧನೆಯ ವಿವರ ಹೀಗಿದೆ.

- **ವಿಶೇಷ ಶ್ರೇಣಿ : 15 ವಿದ್ಯಾರ್ಥಿಗಳು**
- **ಪ್ರಥಮ ದರ್ಜೆ: 53 ವಿದ್ಯಾರ್ಥಿಗಳು**
- **ದ್ವಿತೀಯ ದರ್ಜೆ: 08 ವಿದ್ಯಾರ್ಥಿಗಳು**
- **ತೃತೀಯ ದರ್ಜೆ: 03 ವಿದ್ಯಾರ್ಥಿಗಳು**

### ವಿಭಾಗವಾರು ಸಾಧಕರು

- **ಕಲಾ ವಿಭಾಗ:** ರಮ್ಯ ಮತ್ತು ಯಶಸ್ವಿನಿ ತಲಾ 550 ಅಂಕಗಳನ್ನು ಪಡೆಯುವ ಮೂಲಕ ಕಾಲೇಜಿಗೆ ಪ್ರಥಮ ಸ್ಥಾನ ಹಂಚಿಕೊಂಡಿದ್ದಾರೆ.
- **ವಾಣಿಜ್ಯ ವಿಭಾಗ:** ಸಾನಿಯಾ ಭಾನು 547 ಅಂಕ ಗಳಿಸಿ ವಿಭಾಗಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ.
- **ವಿಜ್ಞಾನ ವಿಭಾಗ:** ಸ್ವಾತಿ (543) ಮತ್ತು ಹೇಮಲತಾ (534) ಅಂಕಗಳನ್ನು ಗಳಿಸಿ ಸಾಧನೆ ಮಾಡಿದ್ದಾರೆ.

# ಡಾ.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ವಿಶ್ವದಲ್ಲೇ ಶ್ರೇಷ್ಠವೆನಿಸಿದ ಭಾರತ ಸಂವಿಧಾನದಲ್ಲಿ ಎಲ್ಲ ವರ್ಗದವರಿಗೆ ಸಮಾನ ಹಕ್ಕು ಕಲ್ಪಿಸಿ ನ್ಯಾಯ ಒದಗಿಸಿದ ಡಾ. ಅಂಬೇಡ್ಕರ್ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಎ. ಮಂಜು ಹೇಳಿದರು.

ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ತಾಲೂಕು ಆಡಳಿತದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಡಾ. ಅಂಬೇಡ್ಕರ್ ಅವರ 135ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಆಶೀರ್ವಾದದಿಂದಲೇ ನಾನು ಶಾಸಕನಾಗಿ ಜನಸೇವಕನಾಗಿ ಕೆಲಸ ಮಾಡಲು ಅವಕಾಶ ಸಿಕ್ಕಿದೆ. ಅಂಬೇಡ್ಕರ್ ಆಶಯಗಳಿಗೆ ವಿರುದ್ಧವಾಗಿ ಯಾರೂ ನಡೆದುಕೊಳ್ಳಬಾರದು. ಜಾತಿ ಹೆಸರು ಹೇಳಿಕೊಂಡು ಬೆಳೆದವರು ಆ ಸಮುದಾಯ ಉದ್ದಾರ ಮಾಡಲ್ಲ, ಇದು ತೊಲಗಬೇಕು. ಜನನಾಯಕ ಆಗಬೇಕೆ ಹೊರತು ಜಾತಿ ನಾಯಕ ಆಗುವುದು ತರವಲ್ಲ. ನಾನು ಎಲ್ಲ ವರ್ಗದವರ ಪರ ಇರುವ ಕಾರಣಕ್ಕಾಗಿ ಮೂರು ಪಕ್ಷಗಳಲ್ಲಿ ಸ್ಪರ್ಧಿಸಿ ಗೆದ್ದಿದ್ದು ಕ್ಷೇತ್ರದ ಮತದಾರರು ನನ್ನನ್ನು ಜಾತ್ಯಾತೀತ ನಾಯಕನಾಗಿ ಗುರುತಿಸಿದ್ದಾರೆ ಎಂದರು.

ಸಚಿವನಾಗಿದ್ದ ಬಳಿಕ ನಡೆದ ಚುನಾವಣೆಯಲ್ಲಿ ನಾನು ಸೋತ ನಂತರ ಅಂಬೇಡ್ಕರ್ ಪುತ್ಥಳಿಗೆ ಗೋಪುರ ನಡುವೆ ನಿರ್ಮಿಸದೇ ನಿರ್ಲಕ್ಷ್ಯಿಸಲಾಯಿತು.ಚಅಂಬೇಡ್ಕರ್ ಭವನಕ್ಕೂ ಅಡ್ಡಗಾಲು ಹಾಕಿದ್ದರಿಂದ ಭವನ ಕಾಮಗಾರಿ ಮುಗಿಯಲಿಲ್ಲ. ಇದೀಗ ಅಂಬೇಡ್ಕರ್ ಪುತ್ಥಳಿಗೆ ನನ್ನ ಅವಧಿಯಲ್ಲೇ ಭವ್ಯ ಗೋಪುರ ನಿರ್ಮಿಸಿದ್ದು ಉದ್ಘಾಟನೆ ಮಾಡಿರುವೆ. ಅಂಬೇಡ್ಕರ್ ಭವನದ ಎರಡನೇ ಹಂತದ ಮುಂದುವರಿದ ಕಾಮಗಾರಿಗೆ ಚಾಲನೆ ನೀಡಿದ್ದು ಇನ್ನು ಆರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಂಡು ಉದ್ಘಾಟನೆ ಭಾಗ್ಯ ಕಾಣಲಿದೆ. ಎಲ್ಲ ಪಕ್ಷದ ಮುಖಂಡರನ್ನು ಒಮ್ಮೆ ಕರೆಸುವ ಕೆಲಸವಾಗಲಿದೆ. ನಾನು ಅಂಬೇಡ್ಕರ್ ಅನುಯಾಯಿಯಾದ ಕಾರಣ ಇವೆರಡು ಅಭಿವೃದ್ಧಿ ಕೆಲಸಗಳು ನನ್ನ ಅವಧಿಯಲ್ಲೇ ಮುಗಿಯಲಿದ್ದು ಇದು ನನ್ನ ಪುಣ್ಯದ ಕ್ಷಣ ಎಂದು ತಿಳಿಸಿದರು.

ತಹಸೀಲ್ದಾರ್ ಕೆ.ಸಿ. ಸೌಮ್ಯ ಮಾತನಾಡಿ, ಅಂಬೇಡ್ಕರ್ ಆದರ್ಶಗಳು ಎತ್ತರದಲ್ಲಿದ್ದು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ವಕೀಲೆ ವೈ.ಎಸ್. ಲಕ್ಷ್ಮೀ ಮಾತನಾಡಿ, ದೇಶ ಆಳುವ ಸಂವಿಧಾನ ಕೊಟ್ಟ ಅಂಬೇಡ್ಕರ್ ಎಲ್ಲರಿಗೂ ಸಮಾನ ಹಕ್ಕು ನೀಡಿದ್ದಾರೆ. ಕೆಲವರು ಅಂಬೇಡ್ಕರ್ ಆಶಯಗಳನ್ನು ಸಮಾಧಿ ಮಾಡುತ್ತಿದ್ದಾರೆ. ಚುನಾವಣೆ ಸಮಯದಲ್ಲಿ ಸಣ್ಣ ತೆವಲಿನ ಆಮೀಷಕ್ಕೆ ಮತ ಮಾರಿಕೊಂಡರೆ ವಿಮೋಚನೆ ಎಲ್ಲಿದೆ ಎಂದು ಯೋಚಿಸಬೇಕಾಗುತ್ತದೆ. ಎಲ್ಲರೂ ಜಾತಿ ವೈರುಧ್ಯಗಳಿಂದ ಹೊರಬರಬೇಕು ಎಂದು ಹೇಳಿದರು.

ಬೈಚನಹಳ್ಳಿ ಗ್ರಾಮಾಂತರ ಪದವಿ ಪೂರ್ವ ಕಾಲೇಜು ರಾಜ್ಯಶಾಸ್ತ್ರ ಉಪನ್ಯಾಸಕ ಎಂ.ಎಚ್. ದಿನೇಶ್ ಪ್ರಧಾನ ಭಾಷಣ ಮಾಡಿದರು. ತಾಪಂ ಪ್ರಭಾರಿ ಇಒ ಪ್ರಕಾಶ್, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ರವಿಕುಮಾರ್, ತಾಲೂಕು ನೌಕರರ ಸಂಘದ ಅಧ್ಯಕ್ಷ ಪುಟ್ಟರಾಜು ಇತರರಿದ್ದರು. ಕಾರ್ಗಿಲ್ ಯುದ್ಧದಲ್ಲಿ ಹುತಾತ್ಮರಾದ ಯೋಧ ವೆಂಕಟ್ ತಾಯಿ ಶಿವಮ್ಮ, ನಿವೃತ್ತ ಯೋಧ ಮಂಜುನಾಥ್, ಕ್ರೀಡಾ ಸಾಧಕ ಸ್ವಾಮಿ ಹಾಗೂ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಜೈ ಭೀಮ್ ಚಾರಿಟಬಲ್ ಟ್ರಸ್ಟ್ ವತಿಯಿಂದ ರಕ್ತದಾನ ಶಿಬಿರ ನಡೆಯಿತು.

ಇದಕ್ಕೂ ಮುನ್ನ ಶಾಸಕ ಎ. ಮಂಜು ಅವರು ತಾಲೂಕು ಕಚೇರಿ ಆವರಣದಲ್ಲಿ ಡಾ. ಅಂಬೇಡ್ಕರ್ ಪುತ್ಥಳಿಗೆ ನಿರ್ಮಿಸಿರುವ ರಕ್ಷಣಾ ಗೋಪುರ ಉದ್ಘಾಟಿಸಿದರು. ಪೇಟೆ ಕೆಇಬಿ ರಸ್ತೆಯಲ್ಲಿ ಡಾ. ಅಂಬೇಡ್ಕರ್ ಭವನದ ಮುಂದುವರಿದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದರು.

ಗ್ರಾಮ ವಾಸ್ತವ್ಯ: ಶಾಸಕ ಎ. ಮಂಜು ಅವರು ಡಾ.ಅಂಬೇಡ್ಕರ್ ಅವರ 135ನೇ ಜಯಂತಿ ಅಂಗವಾಗಿ ಪ್ರತಿವರ್ಷದಂತೆ ಈ ಬಾರಿಯೂ ತಾಲೂಕಿನ ಅಬ್ಬೂರು ಮಾಚಗೌಡನಹಳ್ಳಿ ಗ್ರಾಮದ ದಲಿತ ಮಹಿಳೆ ಚಿನ್ನಮ್ಮ ಅವರ ಮನೆಯಲ್ಲಿ ಸೋಮವಾರ ರಾತ್ರಿ ಗ್ರಾಮ ವಾಸ್ತವ್ಯ ಹೂಡಿದರು. ವಿವಿಧ ಇಲಾಖೆ ಅಧಿಕಾರಿಗಳು ಹಾಜರಿದ್ದರು. ಗ್ರಾಮಸ್ಥರು ಹಾಗೂ ಸಾರ್ವಜನಿಕರ ಕುಂದು ಕೊರತೆ ಆಲಿಸಿದರು.

# ಅನುದಾನ ಬಿಡುಗಡೆಗೆ ಒತ್ತಾಯ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ : ಅರ್ಧಂಬರ್ಧ ಸ್ಥಿತಿಯಲ್ಲಿ ನಿಂತಿರುವ ಪೌರ ಕಾರ್ಮಿಕರ ವಸತಿ ಗೃಹಗಳ ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಲು ಸರ್ಕಾರ ಕೂಡಲೇ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು ಎಂದು ಶಾಸಕ ಸಿಮೆಂಟ್ ಮಂಜು ಒತ್ತಾಯಿಸಿದರು.

ಈ ಕುರಿತು ಅವರು ಬೆಂಗಳೂರುನಲ್ಲಿ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಆಯುಕ್ತ ರಾಘವೇಂದ್ರ ಅವರನ್ನು ಭೇಟಿ ಮಾಡಿ, ಸಕಲೇಶಪುರ ನಗರದಲ್ಲಿ ಸ್ಥಗಿತಗೊಂಡಿರುವ ಪೌರ ಕಾರ್ಮಿಕರ ಮನೆಗಳ ನಿರ್ಮಾಣ ಕಾಮಗಾರಿಯನ್ನು ತಕ್ಷಣ ಮರುಪ್ರಾರಂಭಿಸಿ ಶೀಘ್ರದಲ್ಲೇ ಪೂರ್ಣಗೊಳಿಸುವ ಬಗ್ಗೆ ಚರ್ಚೆ ನಡೆಸಿದರು.

ಸಕಲೇಶಪುರ ನಗರದಲ್ಲಿ ಹಲವು ವರ್ಷಗಳಿಂದ ಪೌರ ಕಾರ್ಮಿಕರ ವಸತಿ ಗೃಹಗಳ ನಿರ್ಮಾಣ ಕಾಮಗಾರಿ ಅರ್ಧದಲ್ಲೇ ನಿಂತಿರುವುದರಿಂದ ಕಾರ್ಮಿಕರು ಸಂಕಷ್ಟ ಅನುಭವಿಸುತ್ತಿದ್ದಾರೆ. ಸುರಕ್ಷಿತ ಹಾಗೂ ಸಮರ್ಪಕ ವಾಸಸ್ಥಳವಿಲ್ಲದೆ ಅನೇಕ ಕುಟುಂಬಗಳು ಬಾಡಿಗೆ ಮನೆಗಳಲ್ಲಿ ಅಥವಾ ಅಸೌಕರ್ಯಕರ ಪರಿಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾರೆ. ಶೀಘ್ರದಲ್ಲೇ ಮಳೆಗಾಲ ಆರಂಭವಾಗುವುದರಿಂದ ಪೌರಕಾರ್ಮಿಕರು ಮತ್ತಷ್ಟು ತೊಂದರೆ ಅನುಭವಿಸಲಿದ್ದಾರೆ. ಪೌರ ಕಾರ್ಮಿಕರ ಜೀವನಮಟ್ಟ ಸುಧಾರಿಸಲು ಉದ್ದೇಶಿಸಿದ್ದ ಯೋಜನೆ ವಿಳಂಬವಾಗಿರುವುದು ಸಾರ್ವಜನಿಕರ ಅಸಮಾಧಾನಕ್ಕೂ ಕಾರಣವಾಗಿದೆ.

ಈ ಹಿನ್ನೆಲೆದಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸುವುದು ಅತ್ಯಗತ್ಯವಾಗಿದ್ದು, ಅಗತ್ಯ ಅನುದಾನವನ್ನು ಬಿಡುಗಡೆ ಮಾಡಿ ತಾಂತ್ರಿಕ ಹಾಗೂ ಆಡಳಿತಾತ್ಮಕ ಅಡಚಣೆಗಳನ್ನು ನಿವಾರಿಸಲು ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಶಾಸಕರು ಮನವಿ ಮಾಡಿದರು.

ಪೌರ ಕಾರ್ಮಿಕರು ನಗರ ಸ್ವಚ್ಛತೆ ಹಾಗೂ ಸಾರ್ವಜನಿಕ ಆರೋಗ್ಯ ಕಾಪಾಡುವಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅವರಿಗೆ ಗೌರವಯುತ ವಾಸಸ್ಥಳ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆದ್ದರಿಂದ ಈ ಯೋಜನೆಯನ್ನು ತುರ್ತಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಶಾಸಕರು ಆಗ್ರಹಿಸಿದರು.

# ಆರೋಗ್ಯ ತಪಾಸಣೆ ಯಶಸ್ವಿ ವೈದ್ಯರ ತಂಡಕ್ಕೆ ಧನ್ಯವಾದ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಮೈಸೂರಿನ ಕ್ಲಿಯರ್ ಮೆಡಿ ರೇಡಿಯಂಟ್ ಹಾಸ್ಪಿಟಲ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಯಶಸ್ವಿಯಾಯಿತು.

ನಗರ ಹಾಗೂ ಜಿಲ್ಲೆಯ ವಿವಿಧ ತಾಲೂಕುಗಳಿಂದ ಆಗಮಿಸಿದ್ದ ನೂರಾರು ಪತ್ರಕರ್ತರು ಹಾಗೂ ಮಹಿಳೆಯರು, ಹಿರಿಯರು ಸೇರಿದಂತೆ ಅವರ ಕುಟುಂಬ ಸದಸ್ಯರು, ಬೆಳಗ್ಗೆಯಿಂದ ಸಂಜೆವರೆಗೂ ತಮ್ಮ ವಿವಿಧ ಆರೋಗ್ಯ

ಸಮಸ್ಯೆಗಳ ಬಗ್ಗೆ ವೈದ್ಯರನ್ನು ಭೇಟಿ ಮಾಡಿ ಅವರಿಂದ ಸಲಹೆ ಸೂಚನೆ ಪಡೆದರು. ಹೆಚ್ಚಾಗಿ ಜಿಬಿಆರ್‌ಎಸ್(ಬ್ಲಡ್ ಶುಗರ್ ಟೆಸ್ಟ್), ಬ್ಲಡ್ ಪ್ಲೆಶರ್ ಪರಿಶೀಲನೆ, ತೂಕ ಅಳತೆ, ಟೆಂಪರಚರ್ ಚೆಕಪ್, ಪಿಎಫ್‌ಟಿ(ಪಲ್ಮೊನರಿ ಫಂಕ್ಷನ್ ಟೆಸ್ಟ್), ಬಿಎಂಡಿ(ಬೋನ್ ಮಿನೆರಲ್ ಡೆಸ್ಟಿನಿ ಟೆಸ್ಟ್) ಪರೀಕ್ಷೆಯನ್ನು ಹೆಚ್ಚಾಗಿ ಮಾಡಿಸಿಕೊಂಡರು.

ಹಾಗೆಯೇ ವೈದ್ಯರ ಸಲಹೆ ಮೇರೆಗೆ ಕೆಲವರು ಇಸಿಜಿ ಪರೀಕ್ಷೆಯನ್ನೂ ಮಾಡಿಸಿಕೊಂಡರು. ಡಾ.ಸಂತೋಷ್, ಡಾ.ರಾಜಲಕ್ಷ್ಮಿ ಹಾಗೂ ಆಸ್ಪತ್ರೆಯ ವಿವಿಧ ವಿಭಾಗಗಳ ಸಿಬ್ಬಂದಿಗಳಾದ ಕೇಶವಪ್ರಸಾದ್, ಪವನ್ ಕುಮಾರ್ ಲಕ್ಷ್ಮಿ, ಮಹಮದ್ ಸಾಬಿರ್ ಮೊದಲಾದವರು ಹಾಜರಿದ್ದು, ಅಗತ್ಯವಿರುವ ಪರೀಕ್ಷೆ ಮಾಡಿಸಿಕೊಂಡರು.

ಶಿಬಿರ ಮುಗಿದ ನಂತರ ಪತ್ರಕರ್ತರ ಭವನದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ವೈದ್ಯರು ಹಾಗೂ ಸಿಬ್ಬಂದಿಯನ್ನು ಸಂಘದ ವತಿಯಿಂದ ಸನ್ಮಾನಿಸಿ ಧನ್ಯವಾದ ಹೇಳಲಾಯಿತು.

# ನಾರಿಶಕ್ತಿ ವಂದನ್ ಬಿಲ್ 2026 ಮಹಿಳೆಯರಿಗೆ ಸಿಕ್ಕ ಗೌರವದ ಸಮ್ಮಾನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ : ಭಾರತದ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದಲೇ ಪ್ರಧಾನಿ ನರೇಂದ್ರ ಮೋದಿ ಅನೇಕ ಜನಮುಖಿ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದು

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನೇತ್ರಾವತಿ ಮಂಜುನಾಥ್ ಹೇಳಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ನರೇಂದ್ರ ಮೋದಿರವರ ಯೋಜನೆಗಳಲ್ಲಿ ಬಹುತೇಕವು ಯಶಸ್ವಿಯಾಗಿ ಜನಸಾಮಾನ್ಯರ ಬದುಕಿಗೆ ನೆರವಾದವು. ಮಹಿಳೆಯರ ಘನತೆ ಹಾಗೂ ಆರೋಗ್ಯದ ದೃಷ್ಟಿಯಿಂದ ಸ್ವಚ್ಛ ಭಾರತ್ ಯೋಜನೆ ಮೂಲಕ ಬಯಲು ಶೌಚಮುಕ್ತ ಭಾರತ ನಿರ್ಮಾಣಕ್ಕೆ ಹೆಜ್ಜೆ ಇಡಲಾಯಿತು. ಉಜ್ವಲ ಯೋಜನೆ ಮೂಲಕ ಉಚಿತ ಗ್ಯಾಸ್ ಸಂಪರ್ಕಗಳನ್ನು ನೀಡಲಾಯಿತು. ಬೇಟಿ ಬಚಾವ್, ಬೇಟಿ ಪಢಾವ್ ಯೋಜನೆಯಡಿ ಹೆಣ್ಣುಮಕ್ಕಳ ಶಿಕ್ಷಣ ಮತ್ತು ಪೋಷಣೆಗೆ ಆದ್ಯತೆ ನೀಡಲಾಯಿತು.

ಇದಲ್ಲದೆ ಜನಧನ್ ಯೋಜನೆ, ಸ್ವನಿಧಿ ಯೋಜನೆ, ಮುದ್ರಾ ಯೋಜನೆ, ವಿಶ್ವಕರ್ಮ ಯೋಜನೆ, ಮಾತೃವಂದನಾ ಯೋಜನೆ, ಆಶ್ರಯ ಯೋಜನೆ ಸೇರಿದಂತೆ ಅನೇಕ ಯೋಜನೆಗಳು ಮಹಿಳೆಯರ ಆರ್ಥಿಕ, ಸಾಮಾಜಿಕ ಮತ್ತು ಕುಟುಂಬ ಜೀವನದಲ್ಲಿ ಮಹತ್ವದ ಬದಲಾವಣೆ ತಂದಿವೆ.

ಮೋದೀಜಿಯವರ ದೂರದೃಷ್ಟಿಯ ಫಲವಾಗಿ ದೇಶದ ಅತ್ಯುನ್ನತ ಹುದ್ದೆಯಾದ ರಾಷ್ಟ್ರಪತಿ ಸ್ಥಾನವನ್ನು ಅಲಂಕರಿಸಿದ್ದಾರೆ. ರಕ್ಷಣೆಯಂತಹ ಮಹತ್ವದ ಖಾತೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದು, ಹಣಕಾಸು ಖಾತೆಯನ್ನೂ ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.

ದೆಹಲಿಯಲ್ಲಿ ಜನಪರ ಆಡಳಿತ ನೀಡುತ್ತಿರುವ ಮಹಿಳಾ ನಾಯಕತ್ವಕ್ಕೂ ವಿಶೇಷ ಸ್ಥಾನವಿದೆ. ಮಹಿಳಾ ಸಬಲೀಕರಣದ ಸಂಕೇತವಾಗಿ ಹಲವು ರಾಜ್ಯಗಳಲ್ಲಿಯೂ ಮಹಿಳೆಯರು ಮುಖ್ಯಮಂತ್ರಿಗಳಾಗಿ ಮತ್ತು ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಭೂಸೇನೆ, ವಾಯುಪಡೆ, ನೌಕಾಪಡೆಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಅವಕಾಶಗಳು ಕಲ್ಪಿಸಲಾಗಿದೆ. ಅಂಗರಕ್ಷಕ ದಳಗಳಲ್ಲಿಯೂ ಮಹಿಳೆಯರ ಸೇರ್ಪಡೆ ಹೆಚ್ಚಾಗಿದೆ. ಮಹಿಳಾ ಕೇಂದ್ರಿತ ಆರ್ಥಿಕತೆ ದೇಶದಲ್ಲಿ ವೇಗ ಪಡೆದುಕೊಂಡಿದೆ.

ವೈಜ್ಞಾನಿಕ, ಬಾಹ್ಯಾಕಾಶ, ವೈದ್ಯಕೀಯ ಹಾಗೂ ಆಡಳಿತ ಕ್ಷೇತ್ರಗಳಲ್ಲಿಯೂ ಮಹಿಳೆಯರಿಗೆ ಸೂಕ್ತ ಸ್ಥಾನಮಾನ ಲಭಿಸಿದೆ. ಇಷ್ಟೆಲ್ಲ ಅಭಿವೃದ್ಧಿಯ ನಡುವೆಯೂ ಮಹಿಳೆಯರ ರಾಜಕೀಯ ಪ್ರತಿನಿಧಿತ್ವ ಹೆಚ್ಚಿಸಲು 33% ಮಹಿಳಾ ಮೀಸಲಾತಿ ಅಗತ್ಯವೆಂಬುದನ್ನು ಮನಗಂಡು, ಸೆಪ್ಟೆಂಬರ್ 2023ರಲ್ಲಿ ನಾರಿಶಕ್ತಿ ವಂದನ್ ವಿಧೇಯಕ ಮಂಡಿಸಲಾಯಿತು. ಈಗ ನಾರಿಶಕ್ತಿ ವಂದನ್ ಅಧಿನಿಯಮ ಜಾರಿಗೆ ಬರುವ ಹಂತ ತಲುಪಿದೆ.

ಮುಂದಿನ ಚುನಾವಣೆಗಳಲ್ಲಿ ಲೋಕಸಭೆ, ವಿಧಾನಸಭೆ, ರಾಜ್ಯಸಭೆ, ವಿಧಾನಪರಿಷತ್ತು ಹಾಗೂ ಸ್ಥಳೀಯ ಸಂಸ್ಥೆಗಳಾದ ಗ್ರಾಮ ಪಂಚಾಯತ್, ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ 33% ಖಚಿತ ಮೀಸಲಾತಿ ದೊರೆಯಲಿದೆ. ಇದರಿಂದ ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಸಕ್ರಿಯ ಉಪಸ್ಥಿತಿ ಮತ್ತಷ್ಟು ಹೆಚ್ಚಲಿದೆ.

ನಾರಿಶಕ್ತಿಗೆ ಇನ್ನಷ್ಟು ಶಕ್ತಿ ನೀಡಿದ ಮೋದೀಜಿಯವರಿಗೆ ಸಮಸ್ತ ಮಹಿಳೆಯರ ಪರವಾಗಿ ವಂದನೆಗಳು

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248